

ಎಂಬ ನಿರ್ಧಾರದಲ್ಲಿ ಇವರೆಲ್ಲಾ ಅಚಲರಾಗಿದ್ದರೂ ತಕ್ಷಣಕ್ಕೆ ನಿಲ್ಲಿಸುವುದು ಅಷ್ಟು ಸಲೀಸಾಗಿರಲಿಲ್ಲ. ಏಕೆಂದರೆ ಇಲ್ಲಿನ ಜನ ಅನೇಕ ಸಮಸ್ಯೆಗಳಲ್ಲಿ ಸಿಲುಕಿದ್ದರು. ಎಲ್ಲದಕ್ಕೂ ಇವರ ಬಡತನ, ಕಲಿತ ಏಕಮಾತ್ರ ಬೇಟೆಯ ವಿದ್ಯೆ ಅಡ್ಡಿ ಬರುತ್ತಿತ್ತು. ಇಲ್ಲಿನ ಆದಿವಾಸಿ ಜನಾಂಗದವರಿಗೆ ಪಕ್ಷಿಗಳನ್ನು ಕೊಲ್ಲುವುದು ಕಾಯಕವೂ, ಅನಿವಾರ್ಯವೂ ಆಗಿತ್ತು. ಮೀನು ಸಿಗದೇ ಇದ್ದಾಗ ನೇರ ಹಕ್ಕಿಗಳನ್ನು ಹಿಡಿಯಲು ಇವರು ಹೊರಟೇ ಬಿಡುತ್ತಿದ್ದರು. ಕಾನೂನು ಬಳಸಿ ಇವರಿಂದ ಈ ಶಿಕಾರಿ ಕೆಲಸ ಬಿಡಿಸಲು ಹೊರಟರೆ ಇವರ ಹೊಟ್ಟೆ ಮೇಲೆ ಕಲ್ಲು ಹಾಕಿದಂತೆ. ಇವರ ಬದುಕೇ ಬೇಟೆಯ ಜೊತೆ ಹೆಣೆದು ಹೋಗಿದ್ದರಿಂದ ಬರಿ ಮಾತಿನಲ್ಲಿ ಇವರ ಕೊಲ್ಲುವ ಕೆಲಸವನ್ನು ನಿಲ್ಲಿಸಲು ಸಾಧ್ಯವಿರಲಿಲ್ಲ.

ಒಂದು ದಿನ ರಾತ್ರಿ ನಂದಕಿಶೋರ್ ಮತ್ತವರ ಗೆಳೆಯರು ಊರಲ್ಲಿ ಸಂಚರಿಸುವಾಗ ಭೀಕರವಾಗಿ ಅಳುವ ಶಬ್ದವನ್ನು ಕೇಳಿದರು. ಒಂದು ಮುರುಕಲು ಮನೆಯಿಂದ ಆ ದನಿ ಬರುತ್ತಿತ್ತು. ಬುಡಕಟ್ಟು ಜನಾಂಗದ ತಾಯಿಯೊಬ್ಬಳು ಹಸಿವಿನಿಂದ ಕಂಗಾಲಾಗಿ ಕೂಗುತ್ತಿದ್ದಳು. ಪಕ್ಷಿಗಳ ಉಳಿಸುವ ಛಲಹೊತ್ತ ತಂಡದವರೆಲ್ಲಾ ಅಲ್ಲಿಗೆ ಹೋದರು. ಆ ತಾಯಿಗೆ ಸಣ್ಣ ವಯಸ್ಸಿನ ನಾಲ್ಕು ಹೆಣ್ಣು ಮಕ್ಕಳಿದ್ದವು. ಗಂಡನಿಗೆ ವಾರದಿಂದ ಸರಿಯಾದ ದುಡಿಮೆ ಸಿಕ್ಕಿರಲಿಲ್ಲ. ಆಕೆ ಪಂಚಮಿ ಅವರ ಕೈ ಹಿಡಿದು "ನಾವು ಬದುಕುವುದು ಕಷ್ಟವಾಗುತ್ತಿದೆ. ನನ್ನ ಮಕ್ಕಳು ಎರಡು ದಿನದಿಂದ ಹಸಿವಿನಲ್ಲಿವೆ. ನಮಗೆ ನಿಮ್ಮ ಭಿಕ್ಷೆ ಬೇಡ. ದಯವಿಟ್ಟು ನನ್ನ ಒಂದು ಮಗುವನ್ನು ನಿಮ್ಮಲ್ಲಿ ಯಾರಾದರೂ ಖರೀದಿಸಿ. ತೋಚಿದಷ್ಟು ದುಡ್ಡು ಕೊಡಿ. ನಾವು ಬದುಕುತ್ತೇವೆ" ಎಂದು ಕೊನೆಗೆ ಕಾಲು ಹಿಡಿದಳು. ಈ ಘಟನೆ ಎಲ್ಲರ ಮನಸ್ಸನ್ನು ಕೊರೆದು ಗಾಯ ಮಾಡಿತು. ನನಗೆ ಈ ಮಾತು ಹೇಳುವಾಗ ಪಂಚಮಿ ಕಂಪಿಸುತ್ತಿದ್ದರು.

ಆಗೊಂದು ಉಪಾಯ ಯೋಚಿಸಿದ ಪಕ್ಷಿ ಪ್ರೇಮಿ ಸಂಘದವರು ಹಳ್ಳಿಗರನ್ನು ಮೀನುಗಾರಿಕೆಯಲ್ಲೇ ಹೆಚ್ಚಾಗಿ ತೊಡಗುವಂತೆ ಮಾಡಲು ಹೊಸ ಬೋಟುಗಳನ್ನು ಖರೀದಿಸಿ ತಂದು ಕೊಟ್ಟರು. ಮೀನು ಹಿಡಿಯುವ ತರಬೇತಿಯನ್ನು ಕೊಡಿಸಿ ಉಚಿತ ಬಲೆಯನ್ನು ಹಂಚಿದರು. ಕಾಲ ಕಳೆದಂತೆ ಹಳ್ಳಿಗರ ಸ್ನೇಹ, ನಂಬುಗೆ ಸಿಕ್ಕೇ ಬಿಟ್ಟವು. ಮನೆಮನೆಗೆ ಹೋಗಿ ಸಭೆ ಮಾಡಿ ಹಕ್ಕಿಗಳ ವೈಶಿಷ್ಟ್ಯ ಬದುಕಿನ ಬಗ್ಗೆ ಮಾಹಿತಿಗಳನ್ನು ಕೊಡಲು ಪ್ರಾರಂಭಿಸಿದರು. ಹಕ್ಕಿಗಳ ಉಳಿವು ಮನುಷ್ಯ ಕುಲಕ್ಕೆ ಎಷ್ಟುಮುಖ್ಯ ಎಂಬುದನ್ನು ಅನೇಕ ಸಾಕ್ಷ್ಯಚಿತ್ರಗಳ ತೋರಿಸಿ ಮನದಟ್ಟು ಮಾಡಿದರು. ನಿಮ್ಮೂರಿನ ಈ ಹಕ್ಕಿಗಳನ್ನು ನೋಡಲು ಪ್ರಪಂಚದ ಜನ ಇಲ್ಲಿಗೆ ಬರುತ್ತಾರೆ. ಆ ಜನರಿಗೆ ಸೌಕರ್ಯ, ಸೇವೆ ಒದಗಿಸಿ ನೀವು ಹಣ ಮಾಡಬಹುದು ಎಂಬ ಹೊಸ ಐಡಿಯಾ ಕೊಟ್ಟರು. ಇವರು ಸೂಚಿಸಿದ ಕಾಸು ಮಾಡುವ ಈ ಹೊಸ ವಿಧಾನ ಇಲ್ಲಿನ ಜನರಿಗೆ ಅರ್ಥವೇ ಆಗಲಿಲ್ಲ.